ಇಂತಿಷ್ಟೇ ಅಂಕಗಳಿಸಬೇಕು, ರ್‍ಯಾಂಕ್ ಗಳಿಸಲೇಬೇಕು, ಶಾಲೆಗೆ ಫಸ್ಟ್ ಬರಬೇಕೆಂಬ ಒತ್ತಾಯ ಹೇರಬೇಡಿ. ಇನ್ನೊಬ್ಬ ವಿದ್ಯಾರ್ಥಿಯೊಂದಿಗೆ ಹೋಲಿಸಿ ನಿಮ್ಮ ಮಗನನ್ನು ಅಥವಾ ಮಗಳನ್ನು ಹೀಯಾಳಿಸಬೇಡಿ. ಮೊದಲ ಪ್ರಯತ್ನದಲ್ಲಿ ಯಶಸ್ವಿಯಾಗದಿದ್ದರೆ ಮತ್ತೊಮ್ಮೆ ಪ್ರಯತ್ನಿಸುವಂತೆ ಧೈರ್ಯ ತುಂಬಿರಿ.

ಮಕ್ಕಳು ಮನೆಯಲ್ಲಿ ಓದುತ್ತಿದ್ದಾಗ ನಿಮ್ಮ ದಿನನಿತ್ಯದ ಹವ್ಯಾಸಗಳಾದ ಟೀವಿ ನೋಡುವುದು, ರೇಡಿಯೊ ಆಲಿಸುವುದು, ದೊಡ್ಡ ದನಿಯಲ್ಲಿ ಇತರರೊಂದಿಗೆ ಚರ್ಚಿಸುವುದನ್ನು ಕಡಿಮೆ ಮಾಡಿರಿ. 'ನಿನ್ನ ಓದಿಗಾಗಿ, ಟ್ಯೂಷನ್‌ಗಾಗಿ ಎಷ್ಟೊಂದು ಖರ್ಚು ಮಾಡಿದ್ದೇವೆ, ಅದು ನೆನಪಿರಲಿ' ಎಂದು ಚುಚ್ಚಬೇಡಿ. ಹೀಗೆಯೇ ಓದು, ಇಷ್ಟು ಹೊತ್ತೇ ಓದು, ಎದನ್ನೇ ಓದು ಎಂದು ಒತ್ತಾಯಿಸಬೇಡಿ.

ಮಕ್ಕಳ ಕಲಿಕೆಯ ಎಲ್ಲ ಹಂತಗಳಲ್ಲಿ ಸೂಕ್ತ ಸಲಹೆ ಸೂಚನೆ ನೀಡುವುದರೊಂದಿಗೆ ಮುಕ್ತ ಮನಸ್ಸಿನ ಪ್ರೋತ್ಸಾಹ ನೀಡಿದರೆ ಯಶಸ್ಸು ನಿಮ್ಮ ಮಕ್ಕಳನ್ನೇ ಹುಡುಕಿಕೊಂಡು ಬರುತ್ತದೆ.

### ಆರೋಗ್ಯ ಕಾಪಾಡಿಕೊಳ್ಳಿ

- ಸಮಯಕ್ಕೆ ಸರಿಯಾಗಿ ಪೌಷ್ಟಿಕ ಆಹಾರ ಸೇವಿಸಿ. ಕರಿದ ತಿಂಡಿ, ಅತಿ ಮಸಾಲೆಯುಕ್ತ ಜಂಕ್ ಫುಡ್‌ನಿಂದ ದೂರವಿರಿ. ಬೀದಿ ಬದಿಯ ಆಹಾರಕ್ಕೆ ತಾತ್ಕಾಲಿಕವಾಗಿಯಾದರೂ ಗುಡ್‌ಬೈ ಹೇಳಿರಿ.
- ದಿನಕ್ಕೆ ಕನಿಷ್ಠ ಏಳು ಗಂಟೆಗಳ ನಿದ್ದೆ ಮಾಡಿ, ಹಾಸಿಗೆಯ ಮೇಲೆ ಮಲಗಿಕೊಂಡು ಓದಬೇಡಿ.
- ಒಂದೇ ಸ್ಥಳದಲ್ಲಿ ಕುಳಿತು ತಾಸುಗಟ್ಟಲೇ ಓದಬೇಡಿ. ಪ್ರತೀ ಗಂಟೆ, ಎರಡು ಗಂಟೆಗೊಮ್ಮೆ ಮನೆಯಲ್ಲೇ ಓಡಾಡಿರಿ.
- ಸಾಕಷ್ಟು ನೀರು ಕುಡಿದು ದೇಹವನ್ನು ತಂಪಾಗಿರಿಸಿಕೊಳ್ಳಿ.
- ಮಲಗುವ ಮುನ್ನ ಮೊಬೈಲ್ ವೀಕ್ಷಣೆ, ಚಾಟಿಂಗ್, ಗೇಮಿಂಗ್ ತ್ಯಜಿಸಿರಿ.
- ಮೊಬೈಲ್/ಟ್ಯಾಬ್/ಲ್ಯಾಪ್‌ಟಾಪ್ ಬಳಸಿಯೇ ಓದುತ್ತೇವೆನ್ನುವವರ ಸ್ಕ್ರೀನ್‌ನ ಬ್ರೈಟ್‌ನೆಸ್ ಅನ್ನು ಕಡಿಮೆ ಮಾಡಿಕೊಂಡು ಓದಿರಿ.

### ಕಳಪೆ ಗೈಡ್ ನಂಬಬೇಡಿ

ವೇಳಾಪಟ್ಟಿಯ ಪ್ರಕಾರ ಓದಿದ ನಂತರ ಪುಸ್ತಕದ ಎಲ್ಲಾ ಪಾಠಗಳ ಮುಖ್ಯ ಮುಖ್ಯ ಸಂಗತಿಗಳನ್ನು ರಿವೈಸ್ ಮಾಡಿ. ರಿವಿಷನ್ ಮಾಡುವುದರಿಂದ ನೀವು ಓದಿದ್ದರ ಕುರಿತು ಸ್ಪಷ್ಟತೆ ದೊರೆತು ಮನಸ್ಸು ನಿರಾಳವಾಗುತ್ತದೆ.

ಮಾರುಕಟ್ಟೆಯಲ್ಲಿ ಸಿಗುವ ಕಡಿಮೆ ಬೆಲೆಯ ಕಡಿಮೆ ದರ್ಜೆಯ ಗೈಡ್‌ಗಳನ್ನು ನಂಬಬೇಡಿ. ಪಠ್ಯಪುಸ್ತಕಗಳನ್ನೇ ಆಧರಿಸಿ ಪರೀಕ್ಷೆಗೆ ತಯಾರಾಗಿರಿ.

### 'ಪ್ರಶ್ನೆಪತ್ರಿಕೆ ಲೀಕ್' ಆಗುತ್ತಾ?

ಇದರ ಬಗ್ಗೆ ಯಾವುದೇ ಊಹೆ, ಲೆಕ್ಕಾಚಾರ ಬೇಡ. ಕೆಲವು ಕಿಡಿಗೇಡಿಗಳು ಬೇಕೆಂದೇ ಹಿಂದಿನ ವರ್ಷದ ಪ್ರಶ್ನೆಪತ್ರಿಕೆಗಳನ್ನು ಕಂಪ್ಯೂಟರ್ ತಂತ್ರಜ್ಞಾನ ಬಳಸಿ ಕ್ರಾಪ್ ಮಾಡಿ 'ಇದು ಈ ವರ್ಷದ್ದೇ' ಎಂದು ಜಾಲತಾಣಗಳಲ್ಲಿ ಹರಿಬಿಟ್ಟು ನಿಮ್ಮನ್ನು ದಾರಿ ತಪ್ಪಿಸುತ್ತಾರೆ. ವರ್ಷವಿಡೀ ಓದಿದ್ದನ್ನೆಲ್ಲಾ ಬದಿಗಿರಿಸಿ, ಸಿಕ್ಕಿರುವ ನಕಲಿ ಪ್ರಶ್ನೆಗಳಿಗೆ ತಯಾರಾಗುವ ವಿದ್ಯಾರ್ಥಿಗಳು ಮೋಸ ಹೋಗಿರುವ ಉದಾಹರಣೆಗಳೇ ಹೆಚ್ಚು. ಈಗ್ಗೆ 4 ವರ್ಷಗಳ ಹಿಂದೆ ಪಿಯುಸಿ ಪ್ರಶ್ನೆಪತ್ರಿಕೆಗಳ ಸೋರಿಕೆ ಆಗಿದ್ದು ನಿಜವಾದರೂ ಅದು ನಡೆಯದಂತೆ ತಡೆಯಲು 'ಕರ್ನಾಟಕ ಸೆಕ್ಯೂರ್ಡ್ ಎಕ್ಸಾಮಿನೇಶನ್ ಸಿಸ್ಟಮ್' (KSES) ಅನ್ನು ಜಾರಿಗೆ ತಂದಿರುವ ಇಲಾಖೆ ಈಗಾಗಲೇ ಮೂರು ವರ್ಷ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿದೆ. ಎಸ್ಸೆಮ್ಮೆಸ್, ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುವ ಮಾಹಿತಿ, ವದಂತಿಗಳಿಗೆ ಕಿವಿಗೊಡಬೇಡಿ.

### ಪ್ರಶ್ನೆಗಳ ಸ್ವರೂಪ ಮತ್ತು ಬ್ಲೂಪ್ರಿಂಟ್

ವಾರ್ಷಿಕ ಪರೀಕ್ಷೆಗಳು ನಿರ್ಣಾಯಕ ಹಾಗೂ ಬಹುಸಂಖ್ಯೆಯ ವಿದ್ಯಾರ್ಥಿಗಳಿಗೆ ಸಂಬಂಧಿಸಿದ್ದಾದ್ದರಿಂದ ಸಾಮಾನ್ಯ ವಿದ್ಯಾರ್ಥಿಯೂ ಉತ್ತೀರ್ಣರಾಗಬೇಕೆಂಬ ತಳಹದಿಯ ಮೇಲೆ ಪ್ರಶ್ನೆಪತ್ರಿಕೆಯನ್ನು ರೂಪಿಸಲಾಗುತ್ತದೆ. 100 ಅಂಕಗಳಲ್ಲಿ ಶೇ. 35ರಷ್ಟು ಸುಲಭ, ಶೇ. 55ರಷ್ಟು ಸಾಧಾರಣ ಮತ್ತು ಶೇ. 10ರಷ್ಟು ಪ್ರಶ್ನೆಗಳು ಕಠಿಣವಾಗಿರುತ್ತವೆ. ಅಂದರೆ ಪರೀಕ್ಷೆಯಲ್ಲಿ ಸಾಮಾನ್ಯ ಅಥವಾ ಪ್ರಥಮ ದರ್ಜೆಯಲ್ಲಿ ಪಾಸಾಗುವುದು ಸುಲಭ. ನೂರಕ್ಕೆ ನೂರು ಅಂಕ ತೆಗೆಯುತ್ತೇನೆನ್ನುವ ವಿದ್ಯಾರ್ಥಿ ಮಾತ್ರ ಹೆಚ್ಚಿನ ಶ್ರಮ ಪಡಬೇಕಾಗುತ್ತದೆ.

ಇಡೀ ರಾಜ್ಯದ ಶೇಕಡಾವಾರು ಫಲಿತಾಂಶವನ್ನು ಹೆಚ್ಚಿಸುವುದು ಇಲ್ಲವೇ ಉತ್ತಮ ಮಟ್ಟದಲ್ಲಿ ಕಾಪಾಡಿಕೊಳ್ಳುವುದು ಸರ್ಕಾರದ, ಶಿಕ್ಷಣ ಇಲಾಖೆಯ ಆದ್ಯತೆ ಮತ್ತು ಜವಾಬ್ದಾರಿ ಎರಡೂ ಆಗಿರುವುದರಿಂದ ಎಲ್ಲ ಪ್ರಶ್ನೆಪತ್ರಿಕೆಗಳೂ 'ವಿದ್ಯಾರ್ಥಿ ಸ್ನೇಹಿ' ಆಗಿರುತ್ತವೆ. ಪ್ರಶ್ನೆಪತ್ರಿಕೆ ಸಿದ್ಧ ಪಡಿಸುವವರು ಈ ಹಿಂದಿನ ಪ್ರಶ್ನೆಪತ್ರಿಕೆಗಳನ್ನು ಗಮನಿಸಿಯೇ ಹೊಸ ಪ್ರಶ್ನೆಪತ್ರಿಕೆಯನ್ನು ತಯಾರಿಸುತ್ತಾರೆ. ಕೆಲಮೊಮ್ಮೆ ಈಗಾಗಲೇ ಬಂದಿರುವ ಪ್ರಶ್ನೆಗಳು ಪುನರಾವರ್ತನೆಗೊಳ್ಳುವ ಸಾಧ್ಯತೆಗಳು ಇರುತ್ತವೆಯಾದ್ದರಿಂದ ಹಿಂದಿನ ಎಲ್ಲಾ ಪ್ರಶ್ನೆಪತ್ರಿಕೆಗಳನ್ನು ಬಿಡಿಸುವುದನ್ನು ಕಲಿತಿರಬೇಕು. ಆದ್ದರಿಂದ ಪ್ರಶ್ನೆಪತ್ರಿಕೆ ಹೇಗಿರುತ್ತದೆ ಎಂಬ ಅಂದಾಜು ಇರುವುದರಿಂದ ಅದರ ಕುರಿತು ತಲೆ ಕೆಡಿಸಿಕೊಳ್ಳುವ ಬದಲು, ಸರಿಯಾದ ತಯಾರಿ ಮಾಡಿಕೊಂಡರೆ ಪರೀಕ್ಷೆಗಳನ್ನು ಸುಲಭವಾಗಿ ಎದುರಿಸಬಹುದು.

### ಕ್ವೆಶ್ಚನ್ ಪೇಪರ್ ಬ್ಲೂಪ್ರಿಂಟ್

ಪಿಯುಸಿ ಶಿಕ್ಷಣದ ಪ್ರತಿಯೊಂದು ವಿಷಯದ ಪಠ್ಯಕ್ರಮ ಬೋಧಿಸಲು ಮತ್ತು ಪ್ರಶ್ನೆಪತ್ರಿಕೆ ಸಿದ್ಧಪಡಿಸಲು ನಿಗದಿ ಮಾಡಿರುವ ಮಾದರಿಗಳನ್ನು ಕ್ರಮವಾಗಿ ಪ್ರೋಗ್ರಾಮ್ ಆಫ್ ವರ್ಕ್ ಹಾಗೂ ಪ್ರಶ್ನೆಪತ್ರಿಕೆ ನೀಲನಕ್ಷೆ (ಬ್ಲೂಪ್ರಿಂಟ್) ಎಂದು ಕರೆಯುತ್ತಾರೆ. ಇವೆರಡೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ. ಅದರ ಪ್ರಕಾರ, ಇಂತಿಷ್ಟು ಅಂಕಗಳಿಗೆ ಸಮನಾದ ಪ್ರಶ್ನೆಗಳನ್ನು ಕೇಳಬೇಕು ಎಂಬುದನ್ನು ಮಾದರಿಯಲ್ಲಿ ವಿವರಿಸಲಾಗಿದೆ. ಪ್ರಶ್ನೆಪತ್ರಿಕೆ ಸಿದ್ಧಪಡಿಸುವವರು ಯಾವ್ಯಾವ ಪಾಠಗಳಿಗೆ ಎಷ್ಟೆಷ್ಟು ಅಂಕಗಳನ್ನು ನಿಗದಿಪಡಿಸಲಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಪ್ರಶ್ನೆಪತ್ರಿಕೆಯ ನೀಲನಕ್ಷೆ ತಯಾರಿಸಿ ಅದರ ಪ್ರಕಾರವೇ ಪ್ರಶ್ನೆಪತ್ರಿಕೆ ಸಿದ್ಧಪಡಿಸಿರುತ್ತಾರೆ.

ಉದಾಹರಣೆಗೆ, ಗಣಿತದ ಮೊದಲ ಪಾಠದಿಂದ 11 ಅಂಕಗಳಿಗೆ ಸಮನಾದ ಪ್ರಶ್ನೆಗಳಿರಬೇಕು ಎಂದಿದ್ದರೆ ಅಷ್ಟು ಇರಲೇಬೇಕು. ಗಣಿತದಂತೆ ಇತರ ಎಲ್ಲ ವಿಷಯಗಳಿಗೂ ಇದು ಅನ್ವಯಿಸುತ್ತದೆ. ಪ್ರತಿಯೊಂದು ಪ್ರಶ್ನೆಪತ್ರಿಕೆಗೂ ತನ್ನದೇ ಆದ ನೀಲನಕ್ಷೆ ಇರುತ್ತದೆ. ಪ್ರಶ್ನೆಗಳ ಸ್ವರೂಪ ಬದಲಾಗಬಹುದೇ ಹೊರತು ಪಾಠಗಳಿಗೆ ನೀಡಲಾದ ಅಂಕಗಳ ಪ್ರಮಾಣ (ವೇಟೇಜ್) ಯಾವ ಕಾರಣಕ್ಕೂ ಬದಲಾಗುವುದಿಲ್ಲ. ಒಂದು ವೇಳೆ ಬದಲಾವಣೆ ಇದ್ದರೂ ಅದು ಕನಿಷ್ಠ ಪ್ರಮಾಣದಲ್ಲಿ ಇರುತ್ತದೆ.

